# ಸ್ವಾಮಿ ಮಾಧವಾನಂದ

## (೧೮೮೮-೧೯೬೫)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

ರಾಮಕೃಷ್ಣ ಮಹಾಸಂಘದ ೯ನೇ ಪರಮಾಧ್ಯಕ್ಷರಾಗಿದ್ದ ಸ್ವಾಮಿ ಮಾಧವಾನಂದರು ಶ್ರೀಮಾತೆ ಶಾರದಾದೇವಿಯವರಿಂದ ಮಂತ್ರದೀಕ್ಷೆ ಪಡೆದಿದ್ದರು ಹಾಗೂ ಸ್ವಾಮಿ ಬ್ರಹ್ಮಾನಂದರಿಂದ ಸಂನ್ಯಾಸ ದೀಕೆಯನ್ನು ಪಡೆದಿದ್ದರು. ಮಾಯಾವತಿ ಅದ್ವೈತ ಆಶ್ರಮದ ಅಧ್ಯಕ್ಷರಾಗಿದ್ದ ಅವರು ಬಳಿಕ ಅಮೆರಿಕದ ಸನ್‌ಫ್ರಾನ್ಸಿಸ್ಕೋ ವೇದಾಂತ ಕೇಂದ್ರದ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸಿದರು. ೧೯೨೯ರಲ್ಲಿ ಭಾರತಕ್ಕೆ ಮರಳಿದ ಅವರು ಸಹ ಕಾರ್ಯದರ್ಶಿಗಳಾಗಿ, ೧೯೩೮ರಲ್ಲಿ ಪ್ರಧಾನ ಕಾರ್ಯದರ್ಶಿಗಳಾಗಿ ಹಾಗೂ ೧೯೬೨ರಲ್ಲಿ ಸಂಘದ ಪರಮಾಧ್ಯಕ್ಷರಾಗಿ ನಿಯೋಜಿತರಾದರು. ೧೯೬೫ರಲ್ಲಿ ಅವರು ಮಹಾಸಮಾಧಿಯನ್ನು ಹೊಂದಿದರು. ಶಾಸ್ತ್ರವಿಚಾರಗಳಲ್ಲಿ ಆಳವಾದ ಪಾಂಡಿತ್ಯವನ್ನು ಹೊಂದಿದ್ದ ಅವರು ಅನೇಕ ಪ್ರಸಿದ್ಧ ಗ್ರಂಥಗಳನ್ನು ರಚಿಸಿದ್ದಾರೆ. ಅದರಲ್ಲಿ ಶಾಂಕರಭಾಷ್ಯ ಸಮೇತವಾದ ಬೃಹದಾರಣ್ಯಕೋಪನಿಷತ್ತಿನ ಆಂಗ್ಲ ಅನುವಾದ ಪ್ರಮುಖವಾಗಿದೆ. ಅವರ ಜೀವನದ ಕೆಲವು ವಿಶೇಷ ಘಟನೆಗಳನ್ನು ಚಿತ್ರಿಸುವ ಈ ಲೇಖನವು **'ಪ್ರಾಚೀನ ಸಾಧುದೇರ್ ಕಥಾ'** ಗ್ರಂಥದ ಮೊದಲ ಸಂಪುಟದಲ್ಲಿ ಬರುವ ಲೇಖನದ ಸಂಗ್ರಹಾನುವಾದವಾಗಿದೆ.

**ಲೋ**ಕಸಾಮಾನ್ಯರ ದೃಷ್ಟಿಗೆ ಗೋಚರಿಸದಂತೆ ಮರೆಯಲ್ಲಿರುವ ಸ್ವಭಾವದ ಯೋಗಿಯೋರ್ವನ ಕುರಿತು ಬರೆಯುವುದು ಸುಲಭವಲ್ಲ. ಭಗವಂತನ ಸಾಮೀಪ್ಯವನ್ನು ನಿರಂತರವಾಗಿ ಸವಿಯುತ್ತಿರುವ ಮಹಾನುಭಾವರು ತಮ್ಮ ಈ ಭಾವದಲ್ಲಿ ಯಾವ ಅಡಚಣೆಯೂ ಉಂಟಾಗದಂತೆ ಏಕಾಂತದಲ್ಲಿ ಇರಬಯಸುತ್ತಾರೆ. ಧರ್ಮ, ದರ್ಶನ, ಶಾಸ್ತ್ರಕ್ಕೆ ಸಂಬಂಧಪಟ್ಟ ಗ್ರಂಥಾಲಯಕ್ಕಿಂತಲೂ ಅಂತಹವರ ಜೀವನವು ನಮ್ಮನ್ನು ಆಧ್ಯಾತ್ಮಿಕ ಜೀವನದಲ್ಲಿ ವಿವೇಕದಿಂದಿರುವಂತೆ ಪ್ರಚೋದಿಸುತ್ತದೆ. ಕೆಲವೇ ಮಾತುಗಳಿಂದಾಗಲಿ, ಬರಿಯ ಮೌನದಿಂದಾಗಲಿ ಅವರು ತಮ್ಮ ಉಪದೇಶವನ್ನು ನೀಡುತ್ತಾರೆ. ಏಕೆಂದರೆ ಧರ್ಮಕ್ಕೆ ಸಂಬಂಧವಾದ ತರ್ಕದಲ್ಲಿ ತೊಡಗುವುದು ಅವರ ಉದ್ದೇಶವಲ್ಲ. ಇಂಥ ಮಹಾತ್ಮರಿಂದ ಹೊರಹೊಮ್ಮಿದ ಕೆಲವೇ ನುಡಿಗಳು ವ್ಯಕ್ತಿಯೊಬ್ಬನ ಜೀವನ-ಪಥವನ್ನೇ ಬದಲಾಯಿಸಬಹುದು.

೧೯೮೯ರಲ್ಲಿ ಅದ್ವೈತ ಆಶ್ರಮವು ಕಲ್ಕತ್ತಾದ ೪, ವೆಲಿಂಗ್‌ಟನ್ ಲೇನ್‌ನಲ್ಲಿ ಸ್ಥಾಪಿತವಾಯಿತು. ಒಂದು ದಿನ ಸ್ವಾಮಿ ಮಾಧವಾನಂದರು ಕಣ್ಣು ಪರೀಕ್ಷೆಗೆಂದು ಡಾ. ನಿಹಾರ್ ಮುಖರ್ಜಿಯವರ ಬಳಿಗೆ ಹೋಗಿದ್ದರು. ಅವರೊಂದಿಗೆ ಒಬ್ಬ ಹಿರಿಯ ಸಂನ್ಯಾಸಿಗಳೂ ಇದ್ದರು. ಬೇಲೂರು ಮಠಕ್ಕೆ ಮರಳುತ್ತಿದ್ದ ಅವರು ಅದ್ವೈತ ಆಶ್ರಮಕ್ಕೆ ಬಂದಿದ್ದರು. ಆಗ ಸೆಕೆಗಾಲ. ನಾವು ತ್ವರಿತದಿಂದ ಉಪಹಾರಕ್ಕಾಗಿ ಎರಡು ಎಳನೀರು ಹಾಗು ಸ್ವಲ್ಪ ಸಿಹಿತಿಂಡಿಯನ್ನು ತಂದೆವು. ದೌರ್ಭಾಗ್ಯವಶಾತ್ ಎಳನೀರಿನ ತಿರುಳು ತುಂಬ ಬಲಿತಿದ್ದು, ಅದರ ನೀರಿನ ರುಚಿ ಕುಂದಿತ್ತು. ಸ್ವಾಮಿ ಮಾಧವಾನಂದಜಿ ಮಾತಿಲ್ಲದೆ ಎಳನೀರನ್ನು ಕುಡಿದರು. ಆದರೆ ಅವರ ಜತೆಯಲ್ಲಿದ್ದವರು ಅದನ್ನು ಕೂಡಲೆ ಹಿಂದಿರುಗಿಸಿದರು. ನಾವು ಅವರಿಗಾಗಿ ಬೇರೆ ಎಳನೀರನ್ನು ಕೊಂಡು



ತರಲು ಇಚ್ಛಿಸಿದೆವು. ಆದರೆ ಸ್ವಾಮಿ ಮಾಧವಾನಂದರು ನಮ್ಮನ್ನು ತಡೆಯುತ್ತ, ''ಸದಾ ದೋಷವನ್ನು ಕಾಣುವ ಸ್ವಭಾವ ಸಂನ್ಯಾಸ ಜೀವನಕ್ಕೆ ತಕ್ಕುದಲ್ಲ'' ಎಂದರು. ''ತಾನಾಗಿಯೇ ನಿನ್ನ ಬಳಿ ಅದೇನು ಬರುತ್ತದೋ ಅದರಿಂದ ಸಂತುಷ್ಟನಾಗಿರು'' ಎಂಬ ಗೀತೆಯ ಉಪದೇಶವನ್ನು ತಮ್ಮ ಜೀವನದಲ್ಲಿ ಅವರು ಅನುಸರಿಸುತ್ತಿದ್ದರು.

ನಾನು ಅದ್ವೈತ ಆಶ್ರಮವನ್ನು ಸೇರಿದಾಗ ಸ್ವಾಮಿ ಗಂಭೀರಾನಂದಜಿ ಮಹಾರಾಜರು ಅಲ್ಲಿನ ಅಧ್ಯಕ್ಷರಾಗಿದ್ದರು. ಪ್ರಕಟಣಾ

ವಿಭಾಗಕ್ಕೆ ಭಾನುವಾರದಂದು ರಜೆಯಿದ್ದುದರಿಂದ ಸಾಮಾನ್ಯ ವಾಗಿ ನಾವು ಅಂದು ಬೇಲೂರು ಮಠಕ್ಕೆ ಹೋಗಿ, ದಿನವೆಲ್ಲ ಅಲ್ಲಿ ಕಳೆದು ಹಿಂದಿರುಗುತ್ತಿದ್ದೆವು. ಸ್ವಾಮಿ ಮಾಧವಾನಂದಜಿ ತಮ್ಮ ವೈಯಕ್ತಿಕ ಇಲ್ಲವೆ ಆಫೀಸಿಗೆ ಸಂಬಂಧಪಟ್ಟ ಪತ್ರಗಳನ್ನು ನಮ್ಮ ಮೂಲಕ ಸ್ವಾಮಿ ಗಂಭೀರಾನಂದಜಿಯವರಿಗೆ ಕಳುಹಿಸುತ್ತಿದ್ದರು. ಈ ಪತ್ರಗಳನ್ನು ಅವರು ಮೊದಲೇ ಉಪಯೋಗಿಸಿದ ಕವರು ಗಳಲ್ಲಿ ಇರಿಸಿ, ಅದನ್ನು ಅಂಟಿಸಿ ಬಳಿಕ ಸ್ವಾಮಿ ಗಂಭೀರಾ ನಂದಜಿಯವರಿಗೆ ಕೊಡಲು ಹೇಳುತ್ತಿದ್ದರು. ರಾಮಕೃಷ್ಣ ಮಿಷನ್ನಿನ ಒಂದೊಂದು ಪೈಸೆಯೂ ಸ್ವಾಮಿ ವಿವೇಕಾನಂದರು ಸುರಿಸಿದ ರಕ್ತ ಹಾಗು ಪರಿಶ್ರಮದಿಂದಲೇ ಲಭಿಸಿರುವುದೆಂಬುದು ಅವರ ಭಾವನೆ. ಕೃಚ್ಛ್ರ ಸಾಧಕರಾಗಿದ್ದ ಅವರು, ಸಂನ್ಯಾಸಿಗಳು ಅಪವ್ಯಯವಾಗಲಿ, ಎಲ್ಲೆಯಿಲ್ಲದೆ ಖರ್ಚನ್ನಾಗಲಿ ಮಾಡುವು ದನ್ನು ವಿರೋಧಿಸುತ್ತಿದ್ದರು.

೧೯೬೧ರಲ್ಲಿ ಮೆದುಳಿನ operationಗೆಂದು ಅಮೆರಿಕಾಗೆ ಹೋಗುವ ಮುಂಚೆ ಕಲ್ಕತ್ತೆಯ ೫, ಡೆಹಿ, ಎಂಟಾಲಿ ರೋಡಿನ ಅದ್ವೈತ ಆಶ್ರಮದ ನೂತನ ಕಟ್ಟಡವನ್ನು ಉದ್ಘಾಟಿಸಿದರು. ಪ್ರವೇಶದ್ವಾರದ ರಿಬ್ಬನ್ ಕತ್ತರಿಸಿದ ಬಳಿಕ ಅವರು ಕೈಜೋಡಿಸಿ ಶ್ರೀರಾಮಕೃಷ್ಣರಿಗೆ ನಮಿಸಿದ್ದು ನನಗೆ ನೆನಪಿದೆ. ನಂತರ ಉಪಾ ಹಾರದ ಸಮಯದಲ್ಲಿ ಸಾಧುಗಳೊಬ್ಬರು ಕುತೂಹಲದಿಂದ ''ಮಹಾರಾಜ್, ನೀವು ಅದ್ವೈತ ಆಶ್ರಮದ ನಿಯಮವನ್ನು ಉಲ್ಲಂಘಿಸಿರುವಿರಿ, ಇಲ್ಲಿ ಸ್ವಾಮೀಜಿಯವರ ನಿರ್ದೇಶನದಂತೆ ಧರ್ಮಾಚರಣೆಯನ್ನು ಪಾಲಿಸುವಂತಿಲ್ಲ — ಯಾವುದೇ ದೇವರಿಗೆ ನಮಸ್ಕರಿಸುವ ವಾಡಿಕೆ ಇಲ್ಲಿಲ್ಲ'' ಎಂದು ಅವರಿಗೆ ನೆನಪಿಸಿದಾಗ, ಅವರು, ''It is force of habit, what can I do?'' ಎಂದರು. ಜ್ಞಾನ-ಭಕ್ತಿಗಳ ಸಮ್ಮಿಶ್ರಣವನ್ನು ಅವರ ಜೀವನದಲ್ಲಿ ಕಾಣಬಹುದಾಗಿತ್ತು. ಹೊರನೋಟಕ್ಕೆ ಜ್ಞಾನಿಗಳಂತಿ ದ್ದರೂ ಅವರು ಪ್ರೇಮ-ಭಕ್ತಿರಸದಲ್ಲಿ ಸಂಪೂರ್ಣವಾಗಿ ಮುಳು ಗಿದ್ದರು.

೧೯೬೩ರಲ್ಲಿ ನಾನು ಬೇಲೂರು ಮಠದ ಬ್ರಹ್ಮಚಾರಿಗಳ ತರಬೇತಿ ಕೇಂದ್ರಕ್ಕೆ ಸೇರಬೇಕಾಗಿತ್ತು. ಆದರೆ ಆ ವರ್ಷ ಸ್ವಾಮೀಜಿಯವರ ಜನ್ಮಶತಾಬ್ದಿಯನ್ನು ಆಚರಿಸಬೇಕಾದ್ದರಿಂದ ಸ್ವಾಮಿ ಗಂಭೀರಾನಂದಜಿಯವರು ನನ್ನನ್ನು ತಡೆದರು. ಸ್ವಾಮೀಜಿ ಯವರ Complete Worksನ ಶತಾಬ್ದಿ ಸಂಸ್ಕರಣದ ಬಿಡು ಗಡೆ, ಸ್ವಾಮೀಜಿಯವರ ೭೫ ಛಾಯಾಚಿತ್ರಗಳ ಮುದ್ರಣ ಕಾರ್ಯ ಹಾಗೂ ಪಾರ್ಕ್ ಸರ್ಕಸ್‌ನಲ್ಲಿ ನಡೆಯಲಿದ್ದ ಪುಸ್ತಕ ಮೇಳ-ಎಂದು ಬಿಡುವಿಲ್ಲದೆ ಕಾರ್ಯಗಳಲ್ಲಿ ನಿರತರಾಗಿದ್ದೆವು. ಏನೇ ಆಗಲಿ, ನಾನು ಸ್ವಾಮಿ ಮಾಧವಾನಂದಜಿಯವರ ಬಳಿ ಸಾರಿ ''ಪೂಜ್ಯ ಸ್ವಾಮಿ ಗಂಭೀರಾನಂದಜಿ ಈ ವರ್ಷ ನಾನು ಬ್ರಹ್ಮಚಾರಿ ತರಬೇತಿ ಕೇಂದ್ರಕ್ಕೆ ಸೇರದೆ ಸ್ವಾಮೀಜಿಯವರ ಕಾರ್ಯದಲ್ಲಿ ತೊಡಗಲು ಆದೇಶಿಸಿದ್ದಾರೆ'' ಎಂದೆ. ಅದಕ್ಕವ ರೆಂದರು, ''ಗಂಭೀರಾನಂದರು ಸರಿಯಾಗಿಯೇ ಹೇಳಿದ್ದಾರೆ. ನೀನು ಸ್ವಾಮೀಜಿಯವರ ಕಾರ್ಯವನ್ನು ಮಾಡು. ಒಂದು ವರ್ಷ ತಡವಾಗಿ ಬ್ರಹ್ಮಚಾರಿ ವ್ರತವನ್ನು ಪಡೆದರೆ ಒಂದು ವರ್ಷ junior ಸಂನ್ಯಾಸಿಯಾದೆ ಎಂದು ತಿಳಿಯಬೇಡ. ಸಂನ್ಯಾಸ ಹಾಗು ಬ್ರಹ್ಮಚರ್ಯ ವ್ರತಗಳು ಅನುಷ್ಠಾನಕ್ಕೆ ಸಂಬಂಧಪಟ್ಟವು. ಭಗವಂತನ ಉಪಲಬ್ಧಿಯೇ ಅಸಲು. ಯಾರು senior ಯಾರು junior ಎಂಬುದು ತಿಳಿಯುವುದಾದರೂ ಹೇಗೆ? ಠಾಕೂರರ ಸಾಮೀಪ್ಯವನ್ನು ಪಡೆದವರೆ ನಿಜವಾಗಿಯೂ senior. ಸಂಘ ದಲ್ಲಿ ಹೆಚ್ಚು ಕಾಲ ಇದ್ದವನು senior ಎಂದೇನೂ ಇಲ್ಲ.''

ನಾನು ರಾಮಕೃಷ್ಣ ಮಹಾಸಂಘಕ್ಕೆ ಸೇರಿದ ಬಳಿಕ ಸಾಧು ಗಳಿಂದ ಸ್ವಾಮಿ ಮಾಧವಾನಂದಜಿಯವರ ಕುರಿತು ಅನೇಕ ಸ್ವಾರಸ್ಯಕರ ಘಟನೆಗಳನ್ನು ಕೇಳಿದ್ದೇನೆ. ವೈಯಕ್ತಿಕ ಜೀವನದ ಬಗ್ಗೆ ಅವರು ತುಂಬ ಗೋಪ್ಯವಾಗಿದ್ದರು; ಎಲ್ಲಕ್ಕಿಂತಲೂ ಹೆಚ್ಚಾಗಿ ಅಯಾಚಿತ ಉಪದೇಶವನ್ನು ನೀಡುವುದು ಅವರ ಸ್ವಭಾವಕ್ಕೆ ವಿರುದ್ಧವಾಗಿತ್ತು. ''Brevity is the soul of wit'' — 'ಅಲ್ಪ ಶಬ್ದಗಳು ಬುದ್ಧಿವಂತಿಕೆಯನ್ನು ಪರಿಚಯಿಸುತ್ತದೆ.' ಯಾವ ಪ್ರಶ್ನೆಗೇ ಆಗಲಿ ಸಂಕ್ಷಿಪ್ತವಾಗಿ ಉತ್ತರಿಸುತ್ತಿದ್ದರು. ಅವರ ಮಾತು ಗಳನ್ನು ಆಲಿಸಲು ನಾವು ಸದಾ ತವಕಿಸುತ್ತಿದ್ದೆವು.

೧೯೬೨ರಲ್ಲಿ ಅವರು ದೀಕ್ಷೆಯನ್ನು ಪಡೆದ ನೂತನ ಬ್ರಹ್ಮ ಚಾರಿಗಳನ್ನು ಉದ್ದೇಶಿಸಿ ಬಂಗಾಳಿಯಲ್ಲಿ ಸಂಕ್ಷಿಪ್ತ ಭಾಷಣವನ್ನು ನೀಡಿದರು. ನನ್ನದೇ ತರಗತಿಯಲ್ಲಿದ್ದ ಸಂನ್ಯಾಸಿಯೊಬ್ಬರು ಅವು ಗಳನ್ನು ತಮ್ಮ ದಿನಚರಿ (ಡೈರಿ)ಯಲ್ಲಿ ಬರೆದಿಟ್ಟುಕೊಂಡಿದ್ದು ನನ್ನ ಬಳಿಯಿರುವ ಅದರ ಒಂದು ಪ್ರತಿಯಿಂದ ಕೆಲವನ್ನು ಉಲ್ಲೇ ಖಿಸುತ್ತಿದ್ದೇನೆ.

೧. ಯಾರೇ ಆಗಲಿ, ಸಾಧ್ಯವಾದಷ್ಟು ಸಂಘದ ಸೇವೆಯನ್ನು ಮಾಡಬೇಕು; ಸದಾ ಸಂಘಕ್ಕಾಗಿ ಏನಾದರೂ contribution ನೀಡಬೇಕು.

೨. ನಮ್ಮ interest ಹಾಗೂ ಸಂಘದ interset ನ ನಡುವೆ ಸಂಘರ್ಷಣೆಯುಂಟಾದಾಗ ಸ್ವಾರ್ಥವನ್ನು ತ್ಯಜಿಸಬೇಕು. ಆಗ ನಮ್ಮ ಹಾಗೂ ಸಂಘ ಎರಡರ ಒಳಿತೂ ಆಗುವುದು. ನಮ್ಮ ಅಹಂಕಾರ ಪೂರ್ತಿಯಾಗಿ ಚೂರ್ಣವಾಗದಿದ್ದರೂ ಈ ರೀತಿ ಮಾಡಿದರೆ ಸ್ವಲ್ಪ ಮಟ್ಟಿಗಾದರೂ ಅಹಂಕಾರವನ್ನು ತಡೆಯ ಬಹುದು.

೩. ನಾವೆಲ್ಲ ಪರಸ್ಪರ ಪ್ರೀತಿಯಿಂದಿರಬೇಕು. ಸ್ವಾಮೀಜಿ ಯವರು ತೋರಿಸಿಕೊಟ್ಟಂತೆ ಇದು ಅನುಕರಣೀಯ. ತಪ್ಪು-ದೋಷಗಳನ್ನು ಬದಿಗಿಟ್ಟು ಒಳ್ಳೆಯ ಗುಣಗಳನ್ನು ನೋಡಬೇಕು. Negative ನೋಡದೆ positive side ಅನ್ನು ಕಾಣಬೇಕು. Cups— half-full vs half-emptyಯ ನಡುವೆ half -full ಭಾವವನ್ನು ಗ್ರಹಿಸಬೇಕು.

೪. ಪ್ರತಿಯೊಂದೂ ಕಾರ್ಯವು ಮುಖ್ಯವಾಗಿದ್ದು ಅವುಗಳನ್ನು ಜವಾಬ್ದಾರಿ ವಹಿಸಿ ಮಾಡತಕ್ಕದ್ದು. ಚಿಕ್ಕ-ದೊಡ್ಡ ಕೆಲಸವೆಂದೇನೂ ಇಲ್ಲ. ಗಡಿಯಾರದ ಚಿಕ್ಕ ಮುಳ್ಳು ಹಾಗು ದೊಡ್ಡ ಮುಳ್ಳು-ಎರಡೂ ಗಡಿಯಾರಕ್ಕೆ ಬೇಕಾದವು. ಎರಡೂ ಸರಿಯಾಗಿ ನಡೆದರೆ ಮಾತ್ರ ಗಡಿಯಾರ ಸರಿಯಾದ ಸಮಯವನ್ನು ತೋರಿಸುತ್ತದೆ. ಅಂತೆಯೆ ಈ ಸಂಘದ ಪ್ರತಿಯೊಂದು ಭಾಗವೂ essential.

೫. Comforts ಮನುಷ್ಯನನ್ನು ದೊಡ್ಡವನನ್ನಾಗಿಸುವುದಿಲ್ಲ. ವ್ಯಕ್ತಿಯು ಮಹಾತ್ಮನಾಗುವುದು ಅವನ ಜೀವನದಿಂದ. ಆದ್ದರಿಂದಲೆ comfortsಗೆ ಮಹತ್ವ ನೀಡುವುದು ಸಲ್ಲದು. Comforts ತಾವಾಗಿಯೇ ಬಂದರೆ ಅವುಗಳನ್ನು ಸ್ವೀಕರಿಸಿ, ಬಾರದಿದ್ದರೆ ದುಃಖಿಸಬೇಡಿ. ಇಂದಿಗೆ ಹೋಲಿಸಿದರೆ, ಹಿಂದೆ ಮಠದಲ್ಲಿ ಪೀಠೋಪಕರಣಗಳು ಕಡಿಮೆ ಇದ್ದವೆಂದೇ ಹೇಳಬೇಕು. Plain living and high thinking — ಇದೇ ನಮ್ಮ ಆದರ್ಶವಾಗಿರಬೇಕು.

೬. ಸ್ವಾಮೀಜಿ 'Work is Worship' ಎಂದಿದ್ದಾರೆ. ಆದರೆ ಇತ್ತೀಚೆಗೆ ಇದು ಹೆಚ್ಚಾಗಿ ಕೇಳಿಬರುತ್ತಿಲ್ಲ. ಕೆಲಸ ಮಾಡುವಾಗ ಠಾಕೂರರ ಸೇವೆ ಮಾಡುತ್ತಿದ್ದೇವೆ ಎಂದು ತಿಳಿಯಬೇಕು. ಕೆಲಸವು ಸರಿಯಾಗಿದ್ದರೆ, ಜಪಧ್ಯಾನವೂ ಸರಿಯಾಗಿರುತ್ತದೆ.

೭. ಜಪ-ಧ್ಯಾನ, ಕೆಲಸ, ಶಾಸ್ತ್ರಪಠಣ ಹಾಗೂ ದೇಹರಕ್ಷಣೆ- ಇವೆಲ್ಲವನ್ನೂ ಜೊತೆ ಜೊತೆಗೆ ಅಭ್ಯಾಸ ಮಾಡಬೇಕು — ಈ ಅಭ್ಯಾಸ ಸಮನ್ವಯವಾಗಿದ್ದರೆ ಉತ್ತಮ ಫಲ ದೊರೆಯುವುದಲ್ಲದೆ ನಮ್ಮ ಚಾರಿತ್ರ್ಯದ ವಿಕಸನವೂ ಆಗುತ್ತದೆ.

೮. ನಮ್ಮ ಜೀವನದಲ್ಲಿ ಯಾವುದೇ ulterior motive, ಕ್ಷುದ್ರ-ತುಚ್ಛ ಆಸೆಗಳಾಗಲಿ, ಅಧಿಕಾರ ಪ್ರಾಪ್ತಿ, ಮಾನ-ಯಶಸ್ಸುಗಳ ಅರ್ಜನೆಗಾಗಿ ಪ್ರಯತ್ನಿಸಬಾರದು. God realization ಒಂದೇ ನಮ್ಮ ಮುಖ್ಯ ಆದರ್ಶ ಹಾಗೂ ಧ್ಯೇಯ. ಆದ್ದರಿಂದ ಮನಃಪೂರ್ವಕವಾಗಿಯೂ, ನಿಷ್ಠೆಯಿಂದಲೂ ಭಗವಂತನನ್ನು ಪೂಜಿಸಬೇಕು. ಪೂಜೆಯಲ್ಲಿ ನಿರತರಾದಾಗ sincere ಹಾಗೂ earnest ಅಗಿರಬೇಕು. ಭಗವದ್ದರ್ಶನ ನಿಜವಾಗಿಯೂ ಆತನ ಕೃಪೆಯಿಂದ ಮಾತ್ರವೇ ಸಾಧ್ಯ.

೯. ಅದ್ಭುತವಾದುದನ್ನು ಪಡೆಯುವುದು ನಮ್ಮ ಧ್ಯೇಯವಲ್ಲ. Wonderfully shine ಆಗುವುದೂ ನಮ್ಮ ಲಕ್ಷ್ಯವಲ್ಲ. ಯಥಾಶಕ್ತಿ ಜವಾಬ್ದಾರಿ ವಹಿಸಿ ಸಂಘದ ಸೇವೆಗೈದರೆ ಅದೇ substantial. ಅದರಿಂದಲೇ ನಮ್ಮ ಗೃಹತ್ಯಾಗ ಹಾಗೂ ಸಂನ್ಯಾಸ ಜೀವನವು ಸಾರ್ಥಕವಾಗಿ, ಸಮಾಜ ಕಲ್ಯಾಣವೂ ಆಗುವುದು.

೧೦. ಇತರ ಧರ್ಮ ಸಂಪ್ರದಾಯಗಳಲ್ಲಿ ನಾಲ್ಕಾರು ಜನ ಮಹಾಪುರುಷರಿದ್ದರೆ, ನಮ್ಮ ಸಂಘದಲ್ಲಿ ಸ್ವಯಂ ಭಗವಂತನೇ ಇದ್ದಾನೆ. ಆದ್ದರಿಂದ ನಾವು ಪುಣ್ಯವಂತರೇ ಸರಿ. ಆತನೇ ಕೃಪೆಗೈದು ನಮ್ಮನ್ನು ತಮ್ಮ ಬಳಿಗೆ ಸೆಳೆದಿದ್ದಾನೆ.(ಇಲ್ಲವಾದರೆ) ಸಂನ್ಯಾಸ ಜೀವನವನ್ನು ನಡೆಸುವುದು ಸಹಜವೇನಲ್ಲ! ಬಲು ದುಷ್ಕರ.

೧೧. ಅಲ್ಪ ಸಮಯದಲ್ಲಿ ಗುರಿಯನ್ನು ತಲುಪಲಾಗದು. ದೀರ್ಘಕಾಲ steadily, sincerely or earnestly ಕಾರ್ಯನಿರತರಾಗಬೇಕು. ಆಗಲೇ fulfillment ಸಿಗುವುದು.

೧೯೬೪ರಲ್ಲಿ ನಾನಿನ್ನೂ ಬೇಲೂರು ಮಠದ ಬ್ರಹ್ಮಚಾರಿ ತರಬೇತಿ ಕೇಂದ್ರದಲ್ಲಿದ್ದಾಗ ಸ್ವಾಮಿ ಮಾಧವಾನಂದಜಿಯವರನ್ನೊಮ್ಮೆ ಸಂದರ್ಶಿಸಿದ್ದೆ. ಆಗವರು ಮನಸ್ಸಿನ ಚಂಚಲತೆಯನ್ನು ನಿಯಂತ್ರಿಸುವ, ಮನಸ್ಸನ್ನು ಅಂತರ್ಮುಖಿಯಾಗಿಸುವ ಬಗೆ, ಮುಂತಾದ ಕೆಲವು ಆಧ್ಯಾತ್ಮಿಕ ಜೀವನದ ರಹಸ್ಯಗಳನ್ನು ನನಗೆ ತಿಳಿಸಿದರು.

ಒಮ್ಮೆ ಅವರು ಹಾಸಿಗೆಯ ಮೇಲೆ ಸೊಳ್ಳೆ ಪರದೆಯೊಳಗೆ ಕುಳಿತು ಧ್ಯಾನ ಮಾಡುತ್ತಿದ್ದಾಗ ದುರ್ಘಟನೆಯೊಂದು ಸಂಭವಿಸಿತು. ಧ್ಯಾನಾನಂತರ ಕೆಳಗೆ ಬಾಗಿ ಪ್ರಣಾಮ ಮಾಡುವಾಗ ಅವರು ಮಂಚದಿಂದ ಕೆಳಕ್ಕೆ ಬಿದ್ದರು. ಕಾರಣ, ಅವರು ಧ್ಯಾನಾವಸ್ಥೆಯಿಂದ ಸಂಪೂರ್ಣವಾಗಿ ಬಾಹ್ಯಪ್ರಜ್ಞೆಯನ್ನು ಪಡೆದಿರಲಿಲ್ಲ. ಇದರಿಂದ ಅವರ ಫೀಮರ್ ಬೋನ್ (ತೊಡೆಯ ಎಲುಬು) ಮುರಿಯಿತು. ಆಸ್ಪತ್ರೆಯಿಂದ ಅವರು ಮರಳಿ ಬಂದಾಗ ನಾನು ವಿಚಾರಿಸಿದೆ, ''ಮಹಾರಾಜ್, ಹೇಗಿದ್ದೀರಿ?'' ''ಚೆನ್ನಾಗಿಯೇ ಇದ್ದೇನೆ'' ಎಂದರು ಅವರು. ನಾನು ಮತ್ತೆ ಮುಂದುವರಿಸುತ್ತ, ''ಇನ್ನೂ ನಿಮಗೆ ನೋವು ಇದೆಯೆ?'' ಎಂದಾಗ, ತಮ್ಮ ದೇಹಾವಸ್ಥೆಯ ಬಗ್ಗೆ ಅಷ್ಟೊಂದು ಕಾಳಜಿ ವಹಿಸಿದ್ದನ್ನು ಇಷ್ಟಪಡದೆ, ''ನೀನು ಚೆನ್ನಾಗಿದ್ದೀ ತಾನೆ?'' ಎಂದು ಕೇಳಿದರು. ''ಹ್ಞೂಂ ಮಹಾರಾಜ್'' ಎಂದು ನಾನು ಉತ್ತರಿಸುತ್ತಿದ್ದಂತೆ ಅವರು, ''ನೀನು ಅಷ್ಟೊಂದು ಚೆನ್ನಾಗಿಲ್ಲವೆಂದು ತೋರುತ್ತದೆ. ಯಾವುದೇ ವೈದ್ಯರ ಬಳಿ ಹೋಗಿ ನೀನು ನಿನ್ನ ಆರೋಗ್ಯವನ್ನು ಪರೀಕ್ಷಿಸಿಕೊಂಡರೆ, ನಿನ್ನ ದೇಹದಲ್ಲಿ ಒಂದಲ್ಲ ಒಂದು ಊನವನ್ನು ಕಂಡುಹಿಡಿಯುತ್ತಾರೆ. ಶರೀರವು ಸಂಪೂರ್ಣವಾಗಿ ಸ್ವಸ್ಥವಾಗಿರುವುದು ಪರಸ್ಪರ ವಿರೋಧಿಯೆಂದು ಹೇಳಬೇಕು'' ಎಂದರು. ಅಂದು ನಾನೊಂದು ಯಥಾರ್ಥ ಪಾಠವನ್ನು ಕಲಿತೆ.

ಸ್ವಾಮಿ ಮಾಧವಾನಂದರ ಬಗ್ಗೆ ಬರೆಯುವುದೆಂದರೆ ಅತ್ಯಂತ ಕಠಿಣ ಕಾರ್ಯವೇ ಸರಿ. ಅವರು ಧಾರ್ಮಿಕ ವಿಚಾರವನ್ನು ಚರ್ಚಿಸುವುದು ಮಾತ್ರವಲ್ಲದೆ, ಧರ್ಮಜೀವನವನ್ನು ನಡೆಸಿ, ಧರ್ಮವೆಂದರೆ ಏನೆಂಬುದನ್ನು ಪ್ರಕಾಶಗೊಳಿಸಿದ್ದರು. ಅವರ ಜೀವನವೇ ಉಪದೇಶ. ಸ್ವಾಮಿ ಮಾಧವಾನಂದಜಿಯವರ

ಪೂರ್ವಾಶ್ರಮದ ಹೆಸರು 'ನಿರ್ಮಲ್' ಅಂದರೆ 'ಕಲ್ಮಷರಹಿತವಾದುದು' ಎಂದರ್ಥ. ತಮ್ಮ ಹೆಸರಿಗೆ ತಕ್ಕ ಸಾರ್ಥಕ ಜೀವನವನ್ನು ನಡೆಸಿದ ಮಹಾತ್ಮರಾಗಿದ್ದರವರು.

೨

ಇತರ ಸಾಧುಗಳಿಂದ ಸ್ವಾಮಿ ಮಾಧವಾನಂದರ ಬಗ್ಗೆ ಅನೇಕ ಘಟನೆಗಳನ್ನು ಕೇಳಿರುವೆ.

'ಶ್ರೀರಾಮಕೃಷ್ಣ ವಚನವೇದ'ವನ್ನೋದಿದ ಯುವಕನೊಬ್ಬ ಸಾಧುವಾಗಬೇಕೆಂದು ಬೇಲೂರು ಮಠಕ್ಕೆ ಹೋಗಿ ಸ್ವಾಮಿ ಮಾಧವಾನಂದಜಿಯವರ ಸೆಕ್ರೆಟರಿಗಳಾಗಿದ್ದ ಸ್ವಾಮಿ ಪ್ರಮಥಾನಂದರನ್ನು ಕಂಡನು. ಸ್ವಾಮಿ ಪ್ರಮಥಾನಂದರು ಸ್ವಾಮಿ ಮಾಧವಾನಂದರ ಹತ್ತಿರ, ಯುವಕನು ಸಾಧುವಾಗಬೇಕೆಂದಿದ್ದಾನೆಂದೂ ಅವನು ಪ್ರತಿನಿತ್ಯ 'ವಚನವೇದ'ವನ್ನು ಓದುತ್ತಾನೆ ಎಂದೂ ಹೇಳಿದರು.

ಸ್ವಾಮಿ ಮಾಧವಾನಂದಜಿ ಸೆಕ್ರೆಟರಿಗಳಿಗೆ ಹೇಳಿದರು, ''ಯುವಕನಿಗೆ ದಿನಾ ಸ್ವಾಮೀಜಿಯವರ ಪುಸ್ತಕಗಳನ್ನು ಓದಲು ಹೇಳು. 'ವಚನವೇದ'ವನ್ನು ಓದಿದರೆ ಸಾಧುವಾಗಲು ಸಾಧ್ಯವಿಲ್ಲ. 'ವಚನವೇದ'ವನ್ನೋದಿದರೆ ಭಗವಂತನ ಲಾಭವಾಗುತ್ತದೆ. ಆಗ ಯಾರು ತಾನೆ ಸಾಧುವಾಗಬಲ್ಲರು? ಸ್ವಾಮೀಜಿಯವರ ಪುಸ್ತಕಗಳನ್ನೋದಿದರೆ ಪ್ರೇರಣೆ ಸಿಗುತ್ತದೆ, ಆಗ ಸಾಧುವಾಗುವ ಇಚ್ಛೆ ಜಾಗೃತವಾಗುತ್ತದೆ.''

ಬ್ರಹ್ಮಚಾರಿಗಳೊಬ್ಬರು ಮಾಧವಾನಂದಜಿಯವರ ಬಳಿ ಸಾರಿ, ''ಮಹಾರಾಜ್, ಮನಸ್ಸಿಗೆ ಶಾಂತಿಯಿಲ್ಲದಂತಾಗಿದೆ. ಶಾಂತಿಯನ್ನು ಪಡೆಯುವುದು ಹೇಗೆಂದು ಹೇಳಿರಿ'' ಎಂದರು. ಅದಕ್ಕೆ ಮಹಾರಾಜರೆಂದರು: ''ನಿನ್ನ ಮನಸ್ಸಿಗೆ ಶಾಂತಿಯಿಲ್ಲವೆಂದು ಕೇಳಿ ಬಹಳವೇ ದುಃಖಿತನಾಗಿರುವೆ. ಅದು ಸರಿ, ಅನೇಕ ಶ್ರೀಮಂತರು ದುಬಾರಿ ವಾಹನಗಳಲ್ಲಿ ಹೆಂಡತಿ-ಮಕ್ಕಳನ್ನು ಕರೆದುಕೊಂಡು ಕಲತ್ತೆಯಿಂದ ಬೇಲೂರು ಮಠಕ್ಕೆ ಬರುತ್ತಾರೆ, ಶಾಂತಿ ಪಡೆಯಲೆಂದು. ಠಾಕೂರರಿಗೆ ಪ್ರಣಾಮ ಮಾಡಿ, ನಿನಗೂ ಪ್ರಣಾಮ ಮಾಡುತ್ತಾರೆ. ನಿನ್ನ ಪಾದಧೂಳಿಯಿಂದ ಅವರು ಶಾಂತಿಯನ್ನು ಪಡೆಯುತ್ತಾರೆ. ಆದರೆ ನಿನಗೇ ಶಾಂತಿಯಿಲ್ಲವೆಂದು ಹೇಳುತ್ತಿದ್ದೀಯೆ. ನಾನು ನಿನಗೋಸ್ಕರ ಏನು ಮಾಡಲಿ, ಹೇಳು.''

ಇದೇ ತರಹದ ಮತ್ತೊಂದು ಘಟನೆ ನೆನಪಿಗೆ ಬರುತ್ತಿದೆ. ಸ್ವಾಮಿ ವಾಸುದೇವಾನಂದರು ಒಮ್ಮೆ ಸ್ವಾಮಿ ತುರೀಯಾನಂದರನ್ನು ಕೇಳಿದರು : ಶಾಂತಿಯನ್ನು ಪಡೆಯುವುದು ಹೇಗೆ? ಮಹಾರಾಜರು ಹೇಳಿದರು, ''**ವೈರಾಗ್ಯಮೇವಾಭಯಮ್**'' ಎಂದು ಜಪಿಸು. ಅದರಿಂದಲೇ ಶಾಂತಿ. ಯಾವ ಕಾಮನೆಯನ್ನೂ ಇಟ್ಟುಕೊಳ್ಳಬೇಡ. ಒಳ್ಳೆಯ ವಸ್ತು ತಾನಾಗಿಯೆ ಬಂದರೆ ಸ್ವೀಕರಿಸು. ನಿನ್ನಿಂದ ದೂರ ಸರಿದರೆ, 'ವೈರಾಗ್ಯಮೇವಾಭಯಮ್' ಎನ್ನು. ಮನುಷ್ಯನನ್ನು ನಿರ್ಭೀತನನ್ನಾಗಿ ಮಾಡುವುದೆಂದರೆ, 'ವೈರಾಗ್ಯ' ಒಂದೇ.

ಒಂದು ಸಲ ಸ್ವಾಮಿ ಮಾಧವಾನಂದರು ತಮ್ಮ ಸಹಾಯಕ ಸಾಧುಗಳಿಗೆ ಹೇಳಿದರು, ''ನೋಡು, ನಾನಿನ್ನು 'General Secretary'ಯಾಗಿ ಇರುವುದು ಉಚಿತವಲ್ಲ. ನನ್ನಿಂದ ಯಾವ ಪ್ರಯೋಜನವೂ ಇಲ್ಲ.'' ಸಾಧುಗಳು ಹೇಳಿದರು, ''ಅದೇಕೆ ಮಹಾರಾಜ್?'' ''ನೋಡು, ಸ್ವಲ್ಪ ಮುಂಚೆ ಒಂದೇ ಕೇಂದ್ರದ ಇಬ್ಬರು ಸಾಧುಗಳು ನನ್ನನ್ನು ಬೇರೆಬೇರೆಯಾಗಿ interview ಮಾಡಿದರು. ಒಂದೆ ವಿಷಯವನ್ನು ಇಬ್ಬರು ಎರಡು ರೀತಿಯಲ್ಲಿ ಹೇಳಿದರು. ಈಗ ಯಾರು ನಿಜ ಹಾಗೂ ಯಾರು ಸುಳ್ಳು ಹೇಳುತ್ತಿರುವರೆಂದು ನನಗೆ ತಿಳಿಯದು. Definitely ಒಬ್ಬನು ಹೇಳುತ್ತಿರುವುದು ಸುಳ್ಳಾಗಿರಲೇಬೇಕು. ಠಾಕೂರರಂತೆ ಯಾರು ನಿಜ, ಯಾರು ಸುಳ್ಳು ಹೇಳುತ್ತಿರುವರೆಂದು ತಿಳಿದುಕೊಳ್ಳುವ ಸಾಮರ್ಥ್ಯ ನನಗಿಲ್ಲ. ಅವರಾದರೋ ಇತರರ ಮನಸ್ಸನ್ನು ಕನ್ನಡಿಯಲ್ಲಿ ನೋಡುವಂತೆ ಸ್ಪಷ್ಟವಾಗಿ ನೋಡುತ್ತಿದ್ದರು. ಆದ್ದರಿಂದ ಹೇಳುತ್ತಿದ್ದೇನೆ, ನಾನು resign ಮಾಡುವುದೇ ಒಳ್ಳೆಯದು.'' ಅವರು ತಮ್ಮ ಅಂತಃಕರಣದಿಂದ ಸತ್ಯವನ್ನು ಪಾಲಿಸುತ್ತಿದ್ದರು.

* * * *

ಒಂದು ದಿನ ಗಂಭೀರ ಮಹಾರಾಜರು ನನಗೆ ಹೇಳಿದರು, ''ನೋಡು, ರಾಮಕೃಷ್ಣ ಮಠ-ಮಿಷನ್ನಿನ ಪರಿಚಾಲನೆಯಲ್ಲಿ ನಿರ್ಮಲ್ ಮಹಾರಾಜರ decision ಅನ್ನು ಎಲ್ಲರೂ ಶಿರಸಾ ಒಪ್ಪಿಕೊಳ್ಳುತ್ತಿದ್ದರು. ಅವರ ಮಾತನ್ನು ಮೀರಿ ಯಾರಿಗೂ ಮಾತನಾಡಲು ಸಾಮರ್ಥ್ಯವಿರಲಿಲ್ಲ, ಕಾರಣ ಅವರ ತ್ಯಾಗ-ವೈರಾಗ್ಯ ಮಂಡಿತ ಶುದ್ಧ ಚಾರಿತ್ರ್ಯ, ನಿಃಸ್ವಾರ್ಥತೆ, ಪಕ್ಷಪಾತರಹಿತ ಜೀವನ, ಸಾಧುತ್ವ, ಪಾಂಡಿತ್ಯ, ಸಂಘದ ಮೇಲಿನ ಪ್ರೀತಿ ಹಾಗೂ ನಿಷ್ಠೆ, ಶ್ರೀರಾಮಕೃಷ್ಣ ಹಾಗೂ ಶ್ರೀಮಾತೆಯವರ ಮೇಲೆ ಅವರಿಗಿದ್ದ ಪ್ರೀತಿ ಹಾಗು ಅವರ ಪ್ರಖರ ಬುದ್ಧಿಗಾಗಿ ಎಲ್ಲ ಸಾಧುಗಳೂ ಅವರಿಗೆ ತಮ್ಮ ಶ್ರದ್ಧಾಪೂರ್ಣ ಗೌರವವನ್ನು ಸಲ್ಲಿಸುತ್ತಿದ್ದರು. ಅವರು spirituality, morality ಹಾಗು ethicsಗಳ ಆಧಾರದ ಮೇಲೆ ಸಂಘವನ್ನು ನಡೆಸುತ್ತಿದ್ದರು. ಸಾಧುಗಳ ಮೇಲೆ ಅವರಿಗೆ ಎಲ್ಲೆಯಿಲ್ಲದ ಪ್ರೀತಿ, ಕರುಣೆ ಹಾಗು ಕ್ಷಮೆ.''

ಸ್ವಾಮಿ ಹಿರಣ್ಮಯಾನಂದರು ಹೇಳಿದ್ದರು, ''ನಿರ್ಮಲ್ ಮಹಾರಾಜರು ಯಾವುದೇ ತಪ್ಪಿತಸ್ಥ ಸಾಧುಗಳಿಗೆ ಶಾಸ್ತಿಯನ್ನು ನೀಡಿದರೆ, ಆ ಸಾಧುವು ಅದನ್ನು ಮಹಾನ್ ಸಾಧುಗಳಿಂದ ಬಂದುದೆಂದು ತಿಳಿದು ಶಿರಸಾವಹಿಸುತ್ತಿದ್ದರು. ಅವರ ಮನಸ್ಸಿನಲ್ಲಿ ಯಾವುದೇ ಬಗೆಯ ತಿರಸ್ಕಾರವಾಗಲಿ, ದ್ವೇಷವಾಗಲಿ ಮೂಡುತ್ತಿರಲಿಲ್ಲ.''

ಬೇಲೂರು ಮಠದ ಸಾಧು ನಿವಾಸದಲ್ಲಿದ್ದ ಮನು ಮಹಾರಾಜ್ (ಸ್ವಾಮಿ ಅಚಿಂತ್ಯಾನಂದರು) ಮಠದ ಮ್ಯಾನೇಜರ್ ಆಗಿದ್ದರು. ಅವರು ಒರಟು ಸ್ವಭಾವದವರಾಗಿದ್ದರು. ಹೆಚ್ಚಾಗಿ ಇತರ ಸಾಧುಗಳೊಂದಿಗೆ ಬೆರೆಯುತ್ತಿರಲಿಲ್ಲ. ಒಂದು ದಿನ ನಿರ್ಮಲ್ ಮಹಾರಾಜರು ಅವರನ್ನು ಕರೆದು, ''ಮನು, ನಿನ್ನ ಮೇಲೆ ಒಂದು complaint ಇದೆ.'' ಮನು ಮಹಾರಾಜರು ಉತ್ತರಿಸಿದರು, ''ನಿಮ್ಮ ಹೆಸರಿನಲ್ಲೂ complaint ಇದೆ. '' ನಿರ್ಮಲ್ ಮಹಾರಾಜರು ಉತ್ತರಿಸಿದರು, ''ನೋಡು, ನನ್ನ ಮೇಲಿನ complaint ಅನ್ನು ಕಾಳೀಕೃಷ್ಣ ಮಹಾರಾಜರು (ಪ್ರೆಸಿಡೆಂಟ್, ಸ್ವಾಮಿ ವಿರಜಾನಂದಜಿಯವರು) ವಿಚಾರಿಸುವರು. ಮತ್ತೆ ನಿನ್ನ ಮೇಲಿನ complaint ಅನ್ನು ನಾನು ನೋಡುವೆ.'' ನಿರ್ಮಲ್ ಮಹಾರಾಜ್ General Secretary, the executive head of the Order ಆಗಿದ್ದರು.

ಹಳೆಯ ಮಿಷನ್ ಆಫೀಸಿನ ಮೇಲಿನ ಮಾಳಿಗೆಯಲ್ಲಿ ಬೇಲೂರು ಮಠದ ಲೈಬ್ರರಿ ಇದ್ದು, ಅಲ್ಲಿಯೆ ಟ್ರಸ್ಟಿ ಮೀಟಿಂಗ್ ಕೂಡ ನಡೆಯುತ್ತಿತ್ತು . ಲೈಬ್ರೇರಿಯನ್ ಚಂದ್ರ ಮಹಾರಾಜರ ಹೊಟ್ಟೆಯಲ್ಲಿ ulcer ಇದ್ದುದರಿಂದ ಅವರಿಗಾಗಿ ಒಂದು ಪಾವು ಹಾಲು ಮೀಸಲಾಗಿಟ್ಟಿತ್ತು. ಅಂದಿನ ಬೇಲೂರು ಮಠದ ಆರ್ಥಿಕ ಪರಿಸ್ಥಿತಿ ಅಷ್ಟೊಂದು ಚೆನ್ನಾಗಿರಲಿಲ್ಲವಾದ್ದರಿಂದ ಸರಿಯಾದ ಆಹಾರ ದೊರಕುತ್ತಿರಲಿಲ್ಲ. ಇತ್ತ ಮಠದ ಮ್ಯಾನೇಜರ್ ಮಹಾರಾಜರು ಚಂದ್ರ ಮಹಾರಾಜರಿಗೆ ಹಾಲು ಕೊಡುವುದನ್ನು ನಿಲ್ಲಿಸಿಬಿಟ್ಟರು. ಚಂದ್ರ ಮಹಾರಾಜರು ಲೈಬ್ರರಿಗೆ ಹೋಗಿ ಗಟ್ಟಿಯಾಗಿ ತೇಗತೊಡಗಿದರು. ಲೈಬ್ರರಿಯ ಪೂರ್ವಭಾಗದಲ್ಲಿ ನಿರ್ಮಲ್ ಮಹರಾಜರ ಕೊಠಡಿ ಹಾಗು ಆಫೀಸು. ಅವರು ಚಂದ್ರ ಮಹಾರಾಜರನ್ನು ಕರೆದು ತಮ್ಮ ತೇಗಿನ ಕಾರಣವನ್ನು ತಿಳಿಯಬಯಸಿದಾಗ, ತಮಗೋಸ್ಕರ ಮೀಸಲಾಗಿದ್ದ ಹಾಲನ್ನು ನಿಲ್ಲಿಸಿರುವುದರಿಂದ ಹಾಗಾಗಿರುವುದಾಗಿ ತಿಳಿದುಬಂತು. ಆಗ ನಿರ್ಮಲ್ ಮಹಾರಾಜರು ಚಂದ್ರ ಮಹಾರಾಜರಿಗೆ ನಿಗದಿಯಾಗಿದ್ದ ಹಾಲನ್ನು ಅವರಿಗೆ ಕೊಡಬೇಕೆಂದು ಮ್ಯಾನೇಜರ್ ಮಹಾರಾಜರಿಗೆ ಹೇಳಿ ಕಳುಹಿಸಿದರು. ಕೂಡಲೇ ಮ್ಯಾನೇಜರ್ ಮಹಾರಾಜರು ಚಂದ್ರ ಮಹಾರಾಜರಿಗೆ ಮೀಸಲಾಗಿದ್ದ ಹಾಲನ್ನು ಹಿಂದಿನಂತೆಯೇ ಅವರಿಗೆ ಕೊಡುವಂತೆ ಮಾಡಿದರು. ನಿರ್ಮಲ್ ಮಹಾರಾಜರಿಗೆ ಕೊಡುವಂಥ ನಿಗದಿಯಾಗಿದ್ದ ಹಾಲಿನ ಪರಿಮಾಣವು ಮೊದಲಿನಂತೆಯೇ ಉಳಿಯಿತು.

ಮಾಧವಾನಂದಜಿಯವರು ಪಂಚಾಂಗವನ್ನು ನಂಬುತ್ತಿದ್ದರು. ಎಲ್ಲಿಗಾದರೂ ಹೊರಡುವಾಗ ಪಂಚಾಂಗದಲ್ಲಿ ಶುಭಮೂಹೂರ್ತವನ್ನು ನೋಡಿ ಅದರಂತೆ ಹೊರಡುತ್ತಿದ್ದರು. ಒಮ್ಮೆ ಅವರು ಮಾಯಾವತಿಯಿಂದ ಕುದುರೆಯ ಮೇಲೆ ಕುಳಿತು ಹಿಂದಿರುಗುವಾಗ ಇದ್ದಕ್ಕಿದ್ದಂತೆ ಕುದುರೆಯ ಮೇಲಿಂದ ರಸ್ತೆಯ ಬದಿಗಿದ್ದ ಪೊದೆಯ ಹತ್ತಿರ ಬಿದ್ದುಬಿಟ್ಟರು. ಜೊತೆಯಲ್ಲಿದ್ದ ಸಾಧುಗಳು ತಕ್ಷಣವೇ ಅವರನ್ನು ರಕ್ಷಿಸಿದರು. ಒಬ್ಬ ಸಾಧುಗಳು, ''ಮಹಾರಾಜ್, ನೀವು ಶುಭದಿನ, ಶುಭಮುಹೂರ್ತಗಳನ್ನು ನೋಡಿ ಹೊರಟಿರಾದರೂ accident ಆಯಿತಲ್ಲ!'' ಎನ್ನಲು ಮಹಾರಾಜರು ಉತ್ತರಿಸಿದರು, ''ನೋಡು ಬೆಟ್ಟದಿಂದ ಕೆಳಗೆ ಬಿದ್ದು ಪ್ರಾಣವನ್ನೇ ಕಳೆದುಕೊಳ್ಳಬಹುದಿತ್ತು ! ಬದಲಾಗಿ, ದಿನ-ಕ್ಷಣಗಳನ್ನು ನೋಡಿ ಹೊರಟಿದ್ದೆನಾದ್ದರಿಂದ ರಸ್ತೆಯ ಬದಿಯಲ್ಲಿ ಬಿದ್ದು ಸ್ವಲ್ಪ ತರಚಿಕೊಂಡೆ, ಅಷ್ಟೆ!'' ಎಂದರು.

ಠಾಕೂರರ ಪಾರ್ಷದರ ನಂತರ ಮಾಧವಾನಂದಜಿಯವರು ಮಠದ ಒಬ್ಬ ಆದರ್ಶ ಸಾಧುಗಳೆಂದು ಪರಿಗಣಿತರಾದರು. He was truly a role model. ಠಾಕೂರರು 'ವಚನವೇದ'ದಲ್ಲಿ ಹೇಳಿರುವ ಸಾಧುಗಳ ಲಕ್ಷಣಗಳು ಇವರಲ್ಲಿ ವಿಕಸನಗೊಂಡಿದ್ದವು. ಇಷ್ಟು ಗುಣವಂತ ಸಾಧುಗಳಾಗಿದ್ದರೂ ಅವರಲ್ಲಿ ಸ್ವಲ್ಪವೂ ಅಹಂಕಾರವಿರಲಿಲ್ಲ. ೧೯೬೧ರಲ್ಲಿ Brain tumor operationಗೆಂದು ಅಮೆರಿಕಾಗೆ ಹೋದರು. ಸ್ವಾಮಿ ನಿಖಿಲಾನಂದರು ಅದಕ್ಕೆ ಬೇಕಾದ ಖರ್ಚನ್ನು ವಹಿಸಿಕೊಂಡಿದ್ದರು. ಅವರು ಅಮೆರಿಕಾಗೆ ಹೋಗುವಾಗ ಪ್ಯಾಂಟ್-ಕೋಟನ್ನು ಧರಿಸಿದ್ದುದರಿಂದ ಕಾವಿಯುಟ್ಟ ಸಾಧುಗಳು ಪ್ಯಾಂಟ್-ಕೋಟ್ ಧರಿಸಿದ ಸಜ್ಜನರಿಗೆ ಪ್ರಣಾಮ ಮಾಡುವುದನ್ನು ನೋಡಿ ಏರ್‌ಪೋರ್ಟ್‌ನ ಜನರು ಬೆರಗಾದರು.

೧೯೬೪ರಲ್ಲಿ ನಾನು ಬೇಲೂರು ಮಠದ training centre ನಲ್ಲಿದ್ದೆ. ನನ್ನ ಒಬ್ಬ ಬ್ರಹ್ಮಚಾರಿ ಸಹಪಾಠಿ, ಮಾಧವನ್ ಎಂಬುವರು ಶಾಸ್ತ್ರ ಚರ್ಚೆಯನ್ನು ಮಾಡುತ್ತಿದ್ದು ಗೀತಾ, ಉಪನಿಷತ್ತು , 'ವಿವೇಕ ಚೂಡಾಮಣಿ'ಗಳ ಅನೇಕ ಶ್ಲೋಕಗಳು ಅವರಿಗೆ ಮುಖಸ್ಥವಾಗಿದ್ದವು. ಅವರು ಒಂದು ದಿನ ಸ್ವಾಮಿ ಮಾಧವಾನಂದಜಿಯವರ ಬಳಿ ಶಾಸ್ತ್ರದ ವಿಚಾರವಾಗಿ ನಾನಾ ಪ್ರಶ್ನೆಗಳನ್ನು ಕೇಳಲಾರಂಭಿಸಿದರು. ಮಹಾರಾಜರು ಆಗ ಸಂಘದ ಪ್ರೆಸಿಡೆಂಟ್. ಬ್ರಹ್ಮಚಾರಿಗೆ ಅವರು ನೇರವಾಗಿ ಹೇಳಿದರು, ''ನೋಡು, ನಾನೀಗ 'ವಚನವೇದ'ದ ವಿದ್ಯಾರ್ಥಿ. ನಿನ್ನ ಈ ಶಾಸ್ತ್ರ-ಸಂಬಂಧಿ ಪ್ರಶ್ನೆಗಳನ್ನು ಟ್ರೈನಿಂಗ್ ಸೆಂಟರ್‌ನ ಪ್ರಾಧ್ಯಾಪಕರಿಗೆ ಕೇಳು.'' ಆಗ ಮಹಾರಾಜರು ಬೌದ್ಧಿಕ ಜಗತ್ತನ್ನು ದಾಟಿ ಅನುಭೂತಿಯ ರಾಜ್ಯದಲ್ಲಿದ್ದರು. ಬ್ರಹ್ಮಚಾರಿಗೆ 'ಜ್ಞಾಪಯಿತು ಮಿಚ್ಛಾ' ಅರ್ಥಾತ್ ತಿಳಿದುಕೊಳ್ಳುವ ಇಚ್ಛೆಯ ಬದಲು ತನಗೆಷ್ಟು ತಿಳಿದಿದೆಯೆಂದು ತಿಳಿಸಿಕೊಡುವ ಇಚ್ಛೆಯಿರಬೇಕೆಂದು ಅವರು ಊಹಿಸಿರಬೇಕು!

ಈ ಪ್ರಚಾರವಿಮುಖ ಸಂನ್ಯಾಸಿಗಳು ಅರ್ಧ ಶತಾಬ್ದಿಗಿಂತ ಹೆಚ್ಚು ಕಾಲ ಕಾರ್ಯನಿರತರಾಗಿದ್ದು ಜಗತ್ತಿಗೆ ವಿದಾಯವನ್ನು ಹೇಳಿದರಾದರೂ ಅವರ ಆದರ್ಶ-ಜೀವನವು ಇಂದಿಗೂ ನಮಗೆ ಪ್ರೇರಣೆಯನ್ನು ನೀಡುತ್ತ, ನಿಜವಾದ ಸಾಧುಗಳ ಜೀವನ ಹೇಗಿರಬೇಕೆಂಬುದನ್ನು ತಿಳಿಸಿಕೊಡುತ್ತದೆ.